OS No.414/2015
**PW-1**

**Cross examination by Sri. SBV Counsel for the Defendant No. 1 to 4.**

Witness Duly Sworn on : 29-07-2019

1. ನಾನು ಈ ದಾವೆಯನ್ನು ಸಾರ್ವಜನಿಕರಿಗೆ ಆಗಿರುವ ತೊಂದರೆಯ ಸಲುವಾಗಿ ಹೂಡಿದ್ದೇನೆ. ದಾವೆ ಹೂಡಲು ನಾವು ಊರಿನ ನಾಲ್ಕು ಜನ ಹಿರಿಯರು ಮಾಹಿತಿ ಕೊಟ್ಟಿದ್ದೇವೆ. ದಾವಾ ವಸ್ತು ವಿಷಯಗಳು ನನಗೆ ತಿಳಿದಿವೆ. ಈ ದಾವೆಯಲ್ಲಿ ನಾನು 1 ನೇ ವಾದಿ. 2,4 ಮತ್ತು 5 ನೇ ವಾದಿಯರ ಹೆಸರು ನನಗೆ ಗೊತ್ತಿಲ್ಲ. 3 ನೇ ವಾದಿಯ ಹೆಸರು ನಿಂಗಣ್ಣ.

2. ನಮ್ಮ ಊರಿನಿಂದ ಹೂವಿನಹಿಪ್ಪರಿಗಿ-ತಾಳಿಕೋಟೆ ರಸ್ತೆಗೆ 5-6 ಕಿ.ಮೀ ದೂರ ಇದೆ. ದಾವಾ ಎ.ಬಿ.ಸಿ.ಡಿ ರಸ್ತೆ ಮತ್ತು ಹೂವಿನಹಿಪ್ಪರಿಗಿ -ತಾಳಿಕೋಟೆ ರಸ್ತೆಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ವಾದ ಪತ್ರದ ಹಾತನಕಾಶೆಯಲ್ಲಿ ತೋರಿಸಿರುವ ಎ.ಬಿ.ಸಿ.ಡಿ ರಸ್ತೆ ಸೋಮನಾಳ-ಹುಲಬೆಂಚಿಗೆ ಸೇರುತ್ತದೆ ಆದರೆ ಹೂವಿನಹಿಪ್ಪರಿಗಿ -ತಾಳಿಕೋಟೆ ರಸ್ತೆಗೆ ಸೇರುವುದಿಲ್ಲ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಸಾರ್ವಜನಿಕ ರಸ್ತೆ ಸುಮಾರು 30-40 ಅಡಿ ಅಗಲ ಇರುತ್ತದೆ ಎಂದರೆ ಸರಿ. ದಾವಾ ಎ.ಬಿ.ಸಿ.ಡಿ ರಸ್ತೆ ಸಾರ್ವಜನಿಕ ರಸ್ತೆ ಎಂದು ಸುಳ್ಳು ಬರೆಸಿದ್ದೇನೆ ಎಂದರೆ ಸರಿಯಲ್ಲ. ಸದರಿ ರಸ್ತೆ ಕೇವಲ 7-8 ಮನೆಗಳಿಗೆ ಹೋಗಲು ಇರುವ ರಸ್ತೆ ಎಂದರೆ ಸರಿಯಲ್ಲ. ಸದರಿ ರಸ್ತೆ ಕೇವಲ 7-8 ಅಡಿ ಇರುವ ಹಾಯುವಳಿ ರಸ್ತೆ/ಕಾಲುದಾರಿ ಎಂದರೆ ಸರಿಯಲ್ಲ. ಸದರಿ ರಸ್ತೆಯಲ್ಲಿ ಟಂಟಂ, ಬಸ್ಸು, ಟ್ರ್ಯಾಕ್ಟರ್, ಲಾರಿ ಓಡಾಡುವುದಿಲ್ಲ ಎಂದರೆ ಸರಿ. ಸದರಿ ರಸ್ತೆಯು 6-7 ಅಡಿ ಅಗಲ ಇದೆ ಎಂದರೆ ಸಾಕ್ಷಿಯು ಅಂದಾಜು 10 ಅಡಿ ಇರುಬಹುದು ಎಂದು ನುಡಿಯುವರು.

3. ದಾವಾ ಎ.ಬಿ.ಸಿ.ಡಿ ರಸ್ತೆಗೆ ಹೊಂದಿಕೊಂಡು ಉತ್ತರ ದಿಕ್ಕಿಗೆ ಪ್ರತಿವಾದಿಯ ಮನೆ ಇದೆ ಎಂದು ನಕಾಶೆಯಲ್ಲಿ ಸುಳ್ಳು ನಮೂದು ಮಾಡಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರ ಮನೆಗೆ ದಾವಾ ರಸ್ತೆಗೆ ಹೊಂದಿಕೊಂಡು ಪೂರ್ವ ದಿಕ್ಕಿಗೆ ಇದೆ ಎಂದರೆ

ಸರಿಯಲ್ಲ. ಹಾತನಕಾಶೆಯಲ್ಲಿ ತೋರಿಸಿದಂತೆ ಇ.ಎಫ್.ಜೆ.ಹೆಚ್ ಕ್ಷೇತ್ರವನ್ನು ಪ್ರತಿವಾದಿಯರು ಅತೀಕ್ರಮಣ ಮಾಡಿ ಮನೆ ಕಟ್ಟುತ್ತಿದ್ದಾರೆ ಎಂದು ಸುಳ್ಳು ತೋರಿಸಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ಅಂಶಗಳನ್ನು ಆಧಾರಿಸಿ ಹಾತನಕಾಶೆಯಲ್ಲಿ ತಪ್ಪು ಮಾಹಿತಿ ತೋರಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ರಸ್ತೆಯಲ್ಲಿ ಇ.ಎಫ್.ಜೆ.ಹೆಚ್ ಕ್ಷೇತ್ರವನ್ನು ಪ್ರತಿವಾದಿಯರು ಅತೀಕ್ರಮಣ ಮಾಡಿದ್ದಾರೆ ಎಂದು ಸುಳ್ಳು ಬರೆಸಿದ್ದೇನೆ ಎಂದರೆ ಸರಿಯಲ್ಲ.

4. ನನ್ನ ಹಾತನಕಾಶೆಯಲ್ಲಿ ನಮ್ಮ ಮನೆಗಳನ್ನು ಕಾಣಿಸಿಲ್ಲ ಎಂದರೆ ಸರಿ. ನನ್ನ ಮನೆ ಸೋಮನಾಳ-ಹುಲಬೆಂಚಿ ರಸ್ತೆಗೆ ಹೊಂದಿಕೊಂಡಿದೆ ಎಂದರೆ ಸರಿ. ವಾದಿಯ ಮನೆ ನನ್ನ ಮನೆಯ ಹತ್ತಿರವೇ ಇದೆ ಎಂದರೆ ಸರಿ. 3 ನೇ ವಾದಿಯ ಮನೆ ಸೋಮನಾಳ ರಸ್ತೆಗೆ ಹೊಂದಿಕೊಂಡು ಗ್ರಾಮದ ಹೊರಗೆ ಇದೆ ಎಂದರೆ ಸರಿ. 4 ಮತ್ತು 5 ನೇ ವಾದಿಯ ಮನೆ ದಾವಾ ರಸ್ತೆಯಿಂದ 1 ಕಿ.ಮೀ ಅಂತರದಲ್ಲಿ ಇದೆ ಎಂದರೆ ಸಾಕ್ಷಿಯು ಅರ್ಧ ಕಿ.ಮೀ ದೂರದಲ್ಲಿರುವ ಹೊಸ ಬಡಾವಣೆಯಲ್ಲಿ ಇದೆ ಎಂದು ನುಡಿಯುವರು.

5. ಈ ಹಂತದಲ್ಲಿ ನ್ಯಾಯಾಲಯದ ಪ್ರಶ್ನೆ?

ಹಾಗಾದರೆ ವಾದಿಯರು ದಾವಾ ರೆಸ್ತಯಲ್ಲಿ ಓಡಾಡುವುದಿಲ್ಲವೇ ಎಂಬ ಪ್ರಶ್ನೆಗೆ ಸಾಕ್ಷಿಯು ಅವರೆಲ್ಲಾರೂ ಬೇರೆ ಊರಿನಲ್ಲಿ ಇರುತ್ತಾರೆ ಎಂದು ನುಡಿಯುವರು.

6. ನನ್ನ ವಾದ ಪತ್ರದ 3 ನೇ ಖಂಡಿಕೆಯಲ್ಲಿ ಬರೆದ ಅಂಶಗಳು ಸುಳ್ಳು ಎಂದರೆ ಸರಿಯಲ್ಲ.

ಈ ಹಂತದಲ್ಲಿ ಸಾಕ್ಷಿಯ ಮುಂದುವರೆದ ಪಾಟೀ ಸವಾಲಿಗಾಗಿ ವಕೀಲರು ಸಮಾಯಾವಕಾಶ ಕೋರಿದ್ದರಿಂದ ನೀಡಲಾಯಿತು.

ಓ ಹೇ ಕೇ ಸರಿ ಅದೆ.

ಹೆಚ್ಚುವರಿ ಸಿವ್ಹಿಲ್ ನ್ಯಾಯಾಧೀಶರು
ಬಸವನ ಬಾಗೇವಾಡಿ.